MR. SPEAKER.—The question is:

"That leave be granted to introduce the Karnataka Tax on Luxuries (Hotels and Lodging·Houses) Bill, 1979."

The Motion was adopted and leave was granted.

SRI S. M. YAHYA (Minister for Finance).—I introduce the Karnataka Tax on Luxuries (Hotels and Lodging Houses) Bill, 1979.

MR. SPEAKER.—The Bill is introduced. * *

Karnataka Tax on Entry of goods into Local Areas (For Consumption use or sale) Bill, 1979.

Introduction

MR. SPEAKER.—Hon. Minister for Finance may move the Karnataka Tax on Entry of Good into Local Areas (For Consumption, Use or Sale) Bill, 1979.

5-30 P.M.

SRI S. M. YAHYA (Minister for Finance).—Sir, I beg to move :

"That leave be granted to introduce the Karnataka Tax on Entry of Goods into Local Areas (For Consumption, Use or Sale) Bill, 1979."

MR. SPEAKER.—The question is :

"That leave be granted to introduce the Karnataka Tax on Entry of Goods into Local Areas (For Consuption, Use or Sale) Bill, 1979."

The Motion was adopted and leave was granted.

MR. SPEAKER.—Hon. Minister may introduce the Bill.

SRI S. M. YAHYA (Minister for Finance).—I beg to introduce.

"The Karnataka Tax on Entry of Goods into Local Areas (For Consumption, Use or Sale) Bill, 1979."

MR. SPEAKER.—The Bill is introduced. * *

Now, the Hon. Minister for Finance may please move the motion on The Karnataka Appropriation (No. 2) Bill, 1979 for consideration.

Karnataka Appropriation (No. 2) Bill, 1979

Motion to Consider

† SRI S. M. YAHYA (Minister for Finance).—Sir, I beg to move :

"That The Karnataka Appropriation (No. 2) Bill, 1979 be taken into Consideration."

The question was proposed.

**Bill appended as annexure to this volume.

†ಶ್ರೀಮತಿ ಅನಸೂಯ ಗಜಾನನ ಶರ್ಮ (ಅಂಕೋಲ).—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ಈ ಸಪ್ಲಿಮೆಂಟರಿ ಬಡ್ಜೆಟನ್ನು ಪಾಸ್ ಮಾಡಿ ಕೊಡಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ಹೇಳಬೇಕೆಂದರೆ, ನಾವು ಕೋಟಿಗಟ್ಟಲೆ ಹಣವನ್ನು ಇವರಿಗೆ ಪಾಸ್ ಮಾಡಿಕೊಡುತ್ತೇವೆ. ನಂತರ ಆ ಹಣ ಎಲ್ಲಿ ಹೋಗುತ್ತದೆಂದು ವಿಚಾರ ಮಾಡಬೇಕಾಗಿದೆ. ನಮಗೆ ಸ್ವಾತಂತ್ರ್ಯ ಬಂದು ೩೦ ವರ್ಷಗಳಾದ ಮೇಲೂ ಸಹ ಹಳ್ಳಿಯ ಜನರು ಬಸ್ಸಿಗಾಗಿ ಬಂದು ೧೦-೧೫ ಮೈಲಿಗಳವರೆಗೆ ನಡೆಯಬೇಕಾಗಿದೆ. ಖಾಯಿಲೆ ಬಂದವರನ್ನು ೧೦-೧೫ ಮೈಲಿ ದೂರದಲ್ಲಿರುವ ದವಾಖಾನೆಗೆ ಕಂಬಳಿ ಜೋನೆಯಲ್ಲಿ ಹೊತ್ತು ಕೊಂಡು ಒಯ್ಯಬೇಕಾದ ಪರಿಸ್ಥಿತಿ ನಮ್ಮ ಕಡೆಯಲ್ಲಿ ಇನ್ನೂ ತಪ್ಪಿಲ್ಲ. ಮಳೆಗಾಲದಲ್ಲಿ ಮಕ್ಕಳು ತಮ್ಮ ಬಟ್ಟೆಗಳನ್ನು ಬಿಚ್ಚಿ ತಲೆಯ ಮೇಲಿಟ್ಟುಕೊಂಡು ಹೊಳೆಯನ್ನು ದಾಟಿ ಶಾಲೆಗೆ ಹೋಗಬೇಕಾಗಿದೆ. ಬೆಂಗಳೂರು ಹಾಗೂ ದೊಡ್ಡ ದೊಡ್ಡ ಊರುಗಳನ್ನು ನೋಡಿಕೊಂಡು ಏನೂ ಹೇಳುವುದಕ್ಕೆ ಬರುವುದಿಲ್ಲ. ಆದರೆ ನಮ್ಮ ಹಳ್ಳಿಗಳಿಗೆ ತಾವು ಬಂದರೆ ಅಲ್ಲಿಯ ಪರಿಸ್ಥಿತಿ ಏನಿದೆ ಎಂಬುದನ್ನು ತೋರಿಸುತ್ತೇನೆ. ಅಲ್ಲಿ ಯಾವ ಒಂದು ಸೌಕರ್ಯಗಳೂ ಇಲ್ಲ. ಇಂತಹ ಒಂದು ಪರಿಸ್ಥಿತಿ ಇದೆ. ಇದಕ್ಕೆ ಕಾರಣವೇನೆಂಬುದನ್ನು ವಿಚಾರ ಮಾಡಬೇಕಾಗಿದೆ. ಭ್ರಷ್ಟಾಚಾರದ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಹಿರಿಯ ಮಕ್ಕಳ ಚಾಳಿ ಮನೆ ಮಕ್ಕಳಿಗೆಲ್ಲಾ ಎಂಬಂತೆ ಈ ವಿಚಾರದಲ್ಲಿ ನಾನು ಕಂಡ ಒಂದು ಉದಾಹರಣೆ ಹೇಳುತ್ತೇನೆ. ನಾನು ಕಾರವಾರ ಜಿಲ್ಲೆಯ ಅಂಕೋಲ ಮತದಾರರ ಕ್ಷೇತ್ರದಿಂದ ಆರಿಸಿ ಬಂದಿದ್ದೇನೆ. ಅಲ್ಲಿರುವ ಭೂನ್ಯಾಯ ಮಂಡಲಿಯಲ್ಲಿ ೩ ಜನ ಕಾಂಗ್ರೆಸ್ (ಐ) ಸದಸ್ಯರಿದ್ದಾರೆ. ನಾನೂ ಕೂಡ ಅದರಲ್ಲಿದ್ದೇನೆ. ಕಳೆದ ತಿಂಗಳ ೨೩ನೇ ತಾರೀಖು ಈ ಸದಸ್ಯರುಗಳು ಕೆಲವರಿಂದ ಲಂಚ ಪಡೆದ ಸಂದ್ಧಿ ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಹಾಗೂ ಡೆಕ್ಕನ್‌ಹೆರಾಲ್ಡ್ ಪತ್ರಿಕೆಗಳಲ್ಲಿ ಬಂದಿವೆ. ಈ ವಿಚಾರದಲ್ಲಿ ನಾನು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟು ೭-೮ ದಿವಸಗಳಾದರೂ ಸಹ ಸರ್ಕಾರದಿಂದ ಇನ್ನೂ ಉತ್ತರ ಬಂದಿಲ್ಲ. ಈ ಬಗ್ಗೆ ಇನ್ನೂ ಅಲ್ಲಿಂದ ವಿವರಗಳು ಬಂದಿಲ್ಲವೆಂದು ಹೇಳುತ್ತಾರೆ. ಈ ಘಟನೆ ನಡೆದು ಒಂದು ತಿಂಗಳಾದ ಮೇಲೂ ಸಹ ಇವೊತ್ತಿನವರೆಗೂ ವಿಚಾರಣೆಯಾಗಿಲ್ಲ. ಅಂದರೆ ಈ ಭೂನ್ಯಾಯ ಮಂಡಲಿಗಳನ್ನು ಏತಕ್ಕೆ ರಚನೆ ಮಾಡಿದ್ದಾರೆ? ಇವುಗಳನ್ನು ಬಡವರ ಹಿತಕ್ಕೆ ಮಾಡಿದ್ದಾರೋ ಅಥವಾ ಈ ಸರ್ಕಾರವನ್ನು ಬೆಂಬಲಿಸುತ್ತಿರುವ ಜನರ ಹಿತಕ್ಕಾಗಿ ಮಾಡಿದ್ದಾರೋ ಗೊತ್ತಿಲ್ಲ. ತಗೆಮಬೇಕಾದವರಿಗೆ ಸೂಕ್ತ ಸ್ಥಾನಮಾನಗಳನ್ನು ಕೊಡಲು ಈ ಭೂನ್ಯಾಯ ಮಂಡಲಿಗಳನ್ನು ರಚನೆ ಮಾಡಿದ್ದಾರೋ ಏನೋ ಎನ್ನುವ ಸಂಶಯ ನನಗೆ ಬಂದಿದೆ. ಹೆಚ್ಚಿನ ಭೂನ್ಯಾಯ ಮಂಡಲಿಗಳಲ್ಲಿ ಇದೇ ತಕರಾರು ಇದೆ. ಇದು ಸರ್ಕಾರದ ಗಮನಕ್ಕೆ ಬಂದಿದ್ದರೂ ಅದರ ಕಡೆಗೆ ಸರಕಾರ ಹೆಚ್ಚಿನ ಲಕ್ಷ್ಯ ವಹಿಸಿಲ್ಲ. ಜನರಿಂದ ಲಂಚ ವಸೂಲಿ ಮಾಡುವುದು ನಡದೇ ಇದೆ. ಈ ರೀತಿ ಭ್ರಷ್ಟಾಚಾರದಿಂದ ಕೂಡಿರತಕ್ಕಂಥ ಭೂನ್ಯಾಯ ಮಂಡಲಿಯವರು ಕೊಡತಕ್ಕಂಥ ತಿರ್ಮಾನವೇ ಕೊನೆಯದು. ಅದರ ಮೇಲೆ ಮತ್ತೆ ಅಪೀಲು ಮಾಡಿಕೊಳ್ಳಲು ಅವಕಾಶವೇ ಇಲ್ಲ. ಒಟ್ಟಿನಲ್ಲಿ ಹೇಳಬೇಕೆಂದರೆ ಹೆಚ್ಚಿನ ಭೂನ್ಯಾಯ ಮಂಡಲಿಗಳು ಕಾಂಗ್ರೆಸ್ ಪಕ್ಷದ ಭೂನ್ಯಾಯಮಂಡಲಿಗಳಾಗಿವೆ. ಇಲ್ಲಿ ನಡೆಯತಕ್ಕಂಥ ಲಂಚದ ಹಾವಳಿಯನ್ನು ನೋಡಿದರೆ, ಇವು ಯಾರ ಹಿತಕ್ಕಾಗಿ ಇವೆ ಎಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಬಯಸುತ್ತೇನೆ. ಈ ರೀತಿ ವ್ಯವಹಾರ ನಡೆಯುತ್ತಿರುವಾಗ, ಸರ್ಕಾರದವರು ಕೋಟಿಗಟ್ಟಲೆ ಹಣವನ್ನು ನಾನಾ ಬಾಬುಗಳಿಗೆ ಖರ್ಚು ಮಾಡುವುದನ್ನು ನೋಡಿ ನನಗೆ ಹೆದರಿಕೆಯಾಗುತ್ತಿದೆ. ಈ ರೀತಿ ಖರ್ಚುಮಾಡುತ್ತಿರುವ ಹಣದಲ್ಲಿ ಸ್ವಲ್ಪ ಭಾಗವಾದರೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಹೋಗುತ್ತಿಲ್ಲ. ಇದರಿಂದ ಹಿಂದುಳಿದ ಭಾಗಗಳು ಹಿಂದುಳಿಯುತ್ತಲೇ ಹೋಗುತ್ತಿವೆ.

ಶ್ರೀ ಬಿ. ಎ. ಮೊಹಿದ್ದೀನ್.—ಈ ಬಡ್ಜೆಟಿನಲ್ಲಿ ನಿಮ್ಮ ಜಿಲ್ಲೆಗೆ ಹತ್ತು ಕೋಟಿ ರೂ. ಗಳು ಸಿಗುತ್ತದೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಒಟ್ಟಿನಲ್ಲಿ ಇಲ್ಲಿ ನಾವು ಪಾಸ್ ಮಾಡಿ ಕೊಡತಕ್ಕಂಥ ಹಣ ಸರಿಯಾಗಿ ಸದುಪಯೋಗವಾಗುತ್ತಿಲ್ಲವೆಂದು ಹೇಳಬಹುದು. ಈ ಮೊದಲು ಮಾತನಾಡಿದವರೆಲ್ಲಾ ಈ ಸರ್ಕಾರದ ಆಡಳಿತದಲ್ಲಿ ಭ್ರಷ್ಟಾಚಾರವೆಂಬುದು ತುಂಬಿತುಳುಕಾಡುತ್ತಿದೆ ಎಂದು ಹೇಳಿದ್ದಾರೆ. ಅದನ್ನೇ ನಾನು ಮತ್ತೊಮ್ಮೆ ಒತ್ತಿ ಹೇಳುತ್ತೇನೆ ಹಿರಿಯ ಸದಸ್ಯರಾದಂಥ ಶ್ರೀ ಆರ್ಮುಗಂ ಅವರು ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದರು. ಈ ವಿಚಾರದಲ್ಲಿ ನನ್ನ ಒಂದು ದೃಷ್ಟಿಯಲ್ಲಿ ಹೇಳಬೇಕೆಂದರೆ, ಇಂತಹ ಒಂದು ಭ್ರಷ್ಟ ಸರ್ಕಾರದಲ್ಲಿ ನ್ಯಾಯವನ್ನು ಒದಗಿಸಿಕೊಡತಕ್ಕಂಥ ಕೆಲವು ಅಧಿಕಾರಿಗಳಿರುವುದರಿಂದಲೇ ನಮ್ಮ ರಾಜ್ಯದಲ್ಲಿ ಕೆಲವು ಪ್ರಗತಿಪರವಾದಂಥ ಕೆಲಸಗಳಾಗಿವೆ ಎಂದು

ನ್ಯಾಯನಿಷ್ಠೂರದಿಂದ ವರ್ತಿಸತಕ್ಕಂಥ ಕೆಲವು ಅಧಿಕಾರಿಗಳು ಇಲ್ಲದಿದ್ದರೆ ಇನ್ನೂ ಹೆಚ್ಚಿನ ಅವನತಿಗೆ ದಾರಿಯಾಗುತ್ತಿತ್ತು. ನಾನು ಮುಖ್ಯವಾಗಿ ಹೇಳುವುದಿಷ್ಟೆ, ಈ ಭೂನ್ಯಾಯ ಮಂಡಲಿಗಳನ್ನು ಇನ್ನಾದರೂ ಸುಧಾರಣೆ ಮಾಡಬೇಕು. ಈಗ ನಮ್ಮ ರಾಜ್ಯದಲ್ಲಿ ೧೯೦ ಭೂನ್ಯಾಯ ಮಂಡಲಿಗಳಿವೆ ಎಂದು ಹೇಳಿದ್ದಾರೆ. ಪ್ರತಿ ಭೂನ್ಯಾಯ ಮಂಡಲಿಯಲ್ಲಿಯೂ ೪ ಜನ ಖಾಸಗೀ ಸದಸ್ಯರಿರುತ್ತಾರೆ. ಈ ಭೂನ್ಯಾಯ ಮಂಡಲಿಗಳ ಒಂದು ದಿನದ ಖರ್ಚು ಎಂದರೆ ೩೮,೭೬೦ ರೂ. ಗಳು. ಇದರ ಜೊತೆಗೆ ಸ್ಪೆಷಲ್ ಅಸಿಸ್ಟೆಂಟ್ ಕಮೀಷನರ್ ಹಾಗೂ ಅವರ ಸಿಬ್ಬಂದಿಗೆ ಬೇರೆ ಸರ್ಕಾರ ಖರ್ಚು ಮಾಡಬೇಕಾಗುತ್ತದೆ. ಇಲ್ಲಿ ಕೆಲಸ ಮಾಡುವ ಖಾಸಗೀ ಸದಸ್ಯರು ಎರಡು ಕಡೆಯಿಂದ ಲಂಚ ತೆಗೆದುಕೊಂಡು ಕೊಡತಕ್ಕಂಥ ತೀರ್ಮಾನ ಏನಿದೆ. ಅದೇ ಕೊನೆಯ ತೀರ್ಮಾನ. ಮತ್ತೆ ಅಪೀಲಿಗೆ ಅವಕಾಶವಿಲ್ಲ. ಸರ್ಕಾರದವರು ಇದಕ್ಕಾಗಿ ಇಷ್ಟೆಲ್ಲಾ ಖರ್ಚು ಮಾಡುತ್ತಿರುವಾಗ, ಅಲ್ಲಿನ ವ್ಯವಹಾರಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಹಾಗೂ ತಿದ್ದಬೇಕು. ಇಲ್ಲದಿದ್ದರೆ ಈ ಸರ್ಕಾರಕ್ಕೆ ಅದು ಶೋಭೆ ತರುವುದಿಲ್ಲವೆಂದು ನಾನು ಒತ್ತಿ ಹೇಳುತ್ತೇನೆ.

ಇನ್ನು ಜಮೀನು ಕಳೆದುಕೊಂಡಂಥ ವಿಧವೆಯರಿಗೆ ಹಾಗೂ ಬಡವರಿಗೆ ಕೂಡಲೇ ಪರಿಹಾರ ಕೊಡಿಸುತ್ತೇವೆಂದು ಸರ್ಕಾರದವರು ಹೇಳುತ್ತಿದ್ದರೂ ಸಹ ಅವರುಗಳಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಇದು ನಿಜಕ್ಕೂ ದುರ್ದೈವದ ಸಂಗತಿಯೆಂದು ಹೇಳಬಹುದು; ಸರ್ಕಾರಕ್ಕೆ ದುಡ್ಡು ಕೊಡಲು ತಾಕತ್ತು ಇಲ್ಲದ ಕಾರಣ ಜಮೀನು ಕಳೆದುಕೊಂಡವರು ಕಷ್ಟ ಅನುಭವಿಸಂತಿದ್ದಾರೆ. ಇಂತಹವರಿಗೆ ಕೂಡಲೇ ಪರಿಹಾರ ಧನವನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕನ್ನಡದ ಅಭಿವೃದ್ಧಿಯ ಬಗ್ಗೆ ಸರ್ಕಾರದವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ರಚನೆ ಮಾಡಿದೆ. ಇದಕ್ಕೆ ಸರ್ಕಾರ ಕಳೆದ ವರ್ಷ ೬೭ ಲಕ್ಷ ರೂ: ಗಳನ್ನು ಖರ್ಚು ಮಾಡಿದೆ. ಕನ್ನಡದ ಅಭಿವೃದ್ಧಿಯ ಬಗ್ಗೆ ಈ ಇಲಾಖೆ ಏನು ಕೆಲಸ ಮಾಡಿದೆ ಎಂಬುದು ನನಗೆ ಗೊತ್ತಾಗುವುದಿಲ್ಲ. ಪತ್ರಿಕೆಗಳಲ್ಲಿ ಬರುವಂತಹ ಕನ್ನಡ ಭಾಷೆ ಓದಿದರೆ ಕನ್ನಡ ಭಾಷೆಯ ಉಪಯೋಗ ಸರಿಯಾಗಿ ಆಗುತಿಲ್ಲವೆಂದು ಹೇಳಬಹುದು. ಬೇರೆ ಸಂಘ ಸಂಸ್ಥೆಗಳು ಕನ್ನಡ ಭಾಷೆಯನ್ನು ಯಾವ ರೀತಿ ಉಪಯೋಗ ಮಾಡುತ್ತಿವೆ ಎಂಬುದನ್ನು ಈ ಇಲಾಖೆ ನೋಡುತ್ತಿಲ್ಲ. ಮುಂಬೈನಲ್ಲಿ ೧೨ ಇಂಚು ಮಳೆ ಆಯಿತು. ಬೆಂಗಳೂರಿನಲ್ಲಿ ೩ ಇಂಚು ಮಳೆ ಆಯಿತು ಎಂದು ಹೇಳುತ್ತಾರೆ. ಆದರೆ ಆ ಮುಂಬೈ ಆಕಾಶವಾಣಿಯವರಿಗೆ ಮುಂಬೈಯಲ್ಲಿ ಎಂದು ಸರಿಯಾಗಿ ಕನ್ನಡದಲ್ಲಿ ಉಚ್ಚಾರ ಮಾಡುವುದಕ್ಕೇ ಬರುವುದಿಲ್ಲ. ಆ ರೀತಿ ಅವರು ರೇಡಿಯೋನಲ್ಲಿ ಪ್ರಸಾರ ಮಾಡುತ್ತಿದ್ದಾರೆ. ಇದನ್ನು ಸರಿಪಡಿಸಲು ತಾವು ಸಂಬಂಧಪಟ್ಟ ಸಂಸ್ಥೆಯವರನ್ನು ನೋಡುವುದು ಒಳ್ಳೆಯದೆಂದು ಕಾಣುತ್ತದೆ. ಇನ್ನು ನೈತಿಕ ವಿಷಯವಾಗಿ ನಾನು ಮಾತನಾಡಬೇಕೆಂದಿದ್ದೇನೆ. ನಮ್ಮಲ್ಲಿ ನೈತಿಕತೆ ಎಲ್ಲಿಗೆ ಹೋಗಿದೆ ಎಂಬುದರ ಬಗ್ಗೆ ಈಗ ವಿಚಾರ ಮಾಡಬೇಕಾಗುತ್ತದೆ. ಸರ್ಕಾರ ಎಷ್ಟು ದುಡ್ಡನ್ನು ಖರ್ಚು ಮಾಡುತ್ತಿದ್ದರೂ ಇದರ ಒಂದು ಸಾರ್ಥಕತೆ ನೈತಿಕತೆಯ ಬಗ್ಗೆ ಆಗುತ್ತಿಲ್ಲ. ಇದು ಒಂದು ದುಃಖದ ಸಂಗತಿ ಎಂದು ನಾನು ಹೇಳಬಯಸುತ್ತೇನೆ. ಬಡಜನರ ಬಗ್ಗೆ ಸರ್ಕಾರದವರು ಇಷ್ಟೆಲ್ಲಾ ದುಡ್ಡು ಖರ್ಚು ಮಾಡುತ್ತಿದ್ದರೂ ಅದು ಎಷ್ಟರ ಮಟ್ಟಿಗೆ ಸಾರ್ಥಕವಾಗುತ್ತಿದೆಯೋ ಗೊತ್ತಿಲ್ಲ. ನಮ್ಮ ದೇಶದ ಜನಗಳ ನೈತಿಕ ಮಟ್ಟ ಯಾವ ರೀತಿ ಬೆಳೆದಿದೆ ಎಂದರೆ ತೀರ ಕೆಳಮಟ್ಟಕ್ಕೆ ಹೋಗಿದೆ. ಸರಕಾರ ಯಾವ ಕ್ರಮ ಕೈಕೊಂಡಿಲ್ಲ, ಉದಾಹರಣೆಗೆ ಜಪಾನ್ ದೇಶದಲ್ಲಿ ಆ ದೇಶದ ಜನಕ್ಕೆ ಇಸ್ಪೀಟ್ ಪ್ಯಾಕ್ ಮಾರಾಟ ಮಾಡುವುದಕ್ಕೆ ನಿರ್ಭಂದ ಇದೆ. ಆದರೆ ನಮ್ಮ ದೇಶದಲ್ಲಿ ಇಲ್ಲ. ಇದು ಬಹಳ ವ್ಯಸನಕರವಾದ ಸಂಗತಿ. ನಮ್ಮ ದೇಶದಲ್ಲಿ ಅನೈತಿಕ ವ್ಯವಹಾರಗಳನ್ನು ಯಾವ ಮಟ್ಟಕ್ಕೆ ಹೋಗಿವೆಯೆಂದರೆ ಅವು ತಂಟ್ಟತುದಿಯನ್ನು ಮುಟ್ಟಿವೆ. ಸರ್ಕಾರದವರು ಇದನ್ನು ತಡೆಗಟ್ಟಬೇಕು. ನಮ್ಮ ರಾಜ್ಯದಲ್ಲಿ ಹೆಣ್ಣುಮಕ್ಕಳು ವ್ಯಸನದಲ್ಲಿ ಮುಳುಗಿದ ಗಂಡಸರ ಕೈಯಲ್ಲಿ ಸಿಕ್ಕಿ ಕಣ್ಣೀರಲ್ಲಿ ಕೈ ತೊಳೆಯುತ್ತಿದ್ದಾರೆ. ಹಾಗೂ ತತ್ತರಿಸಿ ಹೋಗಿದ್ದಾರೆ. ಇದು ಬಹಳ ಜನಗಳ ಲಕ್ಷಕ್ಕೆ ಬಂದಿದೆ. ಆದುದರಿಂದ ಎಷ್ಟೆಲ್ಲಾ ದುಡ್ಡನ್ನು ಸರ್ಕಾರ ಖರ್ಚು ಮಾಡಿದರೂ ಪ್ರಯೋಜನ ಸಿಗುತ್ತಿಲ್ಲ. ಕಾರಣ ನೈತಿಕ ನಡತೆಗೆ ಪ್ರಾಮುಖ್ಯತೆ ಕೊಟ್ಟು ಅದರಲ್ಲಿ ಪ್ರಗತಿ ಸಾಧಿಸಬೇಕಾಗುತ್ತದೆ. ಜನರಲ್ಲಿ ದುಶ್ಚಟಗಳು ಏನಿವೆ ಅವುಗಳನ್ನು ದೂರ ಮಾಡುವ ಪ್ರಯತ್ನವನ್ನು ಮಾಡಬೇಕು. ಅಂಥದ್ದನ್ನು ತಡೆಗಟ್ಟುವುದಕ್ಕೆ ಸಮಿತಿಗಳನ್ನು ಬೇಕಾದರೂ ನೇಮಿಸಿ. ಈ ರೀತಿ ಮಾಡದೇ ಹೋದರೆ ಸರ್ಕಾರ ಖರ್ಚು ಮಾಡುವಂತಹ ದುಡ್ಡು ವ್ಯರ್ಥವಾಗುತ್ತದೆ. ಉದಾಹರಣೆಗೆ ಹೇಳುತ್ತೇನೆ ವಿದ್ಯಾಭ್ಯಾಸಕ್ಕೆ ಎಷ್ಟೋ ಕೋಟಿ ರೂಪಾಯಿ

ಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನವನ್ನು ಹರಿಸಿಲ್ಲ. ಅಶಿಕ್ಷಿತ ಮಂಸಲ್ಮಾನ್ ಹೆಣ್ಣು ಮಕ್ಕಳ ಗತಿ ದೇವರಗತಿಯಾಗಿದೆ. ಒಬ್ಬ ತಜ್ಞ ಕವಿ ಹೇಳಿದ್ದಾನೆ. ಒಬ್ಬ ಗಂಡಸು ವಿದ್ಯೆಯನ್ನು ಕಲಿತರೆ ಒಬ್ಬರು ಕಲಿತಂತೆ ಆಗುತ್ತದೆ. ಒಬ್ಬ ಮಹಿಳೆ ವಿದ್ಯೆಯನ್ನು ಕಲಿತರೆ ಒಂದು ಕುಟುಂಬವನ್ನು ಕಲಿಸಿದ ಹಾಗೆ ಆಗುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗವನ ಕೊಡುವುದು ಆಗತ್ಯ. ಇದರಿಂದ ವಿದ್ಯಾಭ್ಯಾಸದ ಪ್ರಚಾರದ ಕಾರ್ಯ ಸುಲಭವಾಗುತ್ತದೆ. ಜನರಲ್ಲಿ ನೈತಿಕ ಮಟ್ಟದ ಒಂದು ಬೆಳವಣಿಗೆ ಆಗಬೇಕಾದರೆ ತಾಯಂದಿರು ಸುಶಿಕ್ಷಿತರಾಗಬೇಕು. ಹೆಣ್ಣನ್ನು ಬಹಳ ದೃಷ್ಟಿಯಿಂದಾ ಕಾಣುತ್ತಿದ್ದಾರೆ. ಆಕೆ ತಾಯಿ ಸ್ಥಾನದಲ್ಲಿದ್ದು ಕೊಂಡು ತನ್ನ ಗಂಡ, ಮಗ, ತಂದೆ ಇತರೆ ಯಾರೇ ಬಳಗ ಇರಲಿ ತನಗೆ ಸಂಬಂಧಪಟ್ಟವರ ಮೇಲೆ ಎಂತಹ ಪ್ರೀತಿ ವಿಶ್ವಾಸವನ್ನು ತೋರಿಸಿ ಅನ್ನ ಹಾಕುತ್ತಾಳೆ. ತಾನು ಉಪವಾಸ ವಿದ್ದರೂ ಕೂಡ ಮನೆ ಜನರಿಗೆ ಒಂದು ತುತ್ತು ಅನ್ನವನ್ನು ಹಾಕುತ್ತಾಳೆ. ಯಾವುದೇ ಗಂಡನು ಕೆಟ್ಟ ಚಟಕ್ಕೆ ಗುರಿಯಾಗಿ ಮನೆ ಮಡದಿಯ ಮಾಂಗಲ್ಯ ಸೂತ್ರ ಹರಿದೊಯ್ದು, ಮನೆಸ್ಥಿತಿ ಹಾಳುಮಾಡಿ ಮನೆ ಮಕ್ಕಳನ್ನು ಉಪವಾಸ ಹಾಕಿದರೂ ಕೂಡ ಅವನನ್ನು ಕ್ಷಮಿಸಿ, ತಾನು ದುಡಿದು ತಂದ ಉತ್ಪನ್ನ ದಲ್ಲಿ, ಅವರಿಗೆ ಒಂದು ತುತ್ತು ಅನ್ನ ಹಾಕುವದಲ್ಲದೇ ಅವನ ವ್ಯಸನವನ್ನು ಕೂಡ ಕ್ಷಮಿಸುತ್ತಾಳೆ.

ನಾನು ಮತ್ತೊಂದು ವಿಷಯವನ್ನು ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಈಗಾಗಲೇ ಮೂರು ನದಿಗಳನ್ನು ಕಟ್ಟಿಹಾಕಿದ್ದಾರೆ. ಮತ್ತೆ ಎರಡು ನದಿಗಳನ್ನು ಕಟ್ಟಿಹಾಕುವ ಯೋಜನೆಯನ್ನು ಹಾಕಿಕೊಂಡಿದ್ದಾರೆ ಇದು ಸರಿಯಲ್ಲ. ಈಗಾಗಲೇ ಕೆಲವು ನದಿಗಳನ್ನು ಕಟ್ಟಿಹಾಕಿರುವುದರಿಂದ ಎಲ್ಲಾ ಅಡವಿ ಮುಳುಗಿ ಹೋಗಿದೆ. ಈ ರೀತಿ ದುಡ್ಡು ಖರ್ಚು ಮಾಡಿ ನೈಸರ್ಗಿಕ ವಿಕೋಪಕ್ಕೆ ಗುರಿಯಾಗಿ ಮಳೆಬಾರದೇ ಹೋಗುವುದಕ್ಕೆ ಕಾರಣರಾಗುತ್ತಾರೆ. ಇದು ಸರಿಯಲ್ಲ. ನಮ್ಮ ಜಿಲ್ಲೆಯಲ್ಲಿ ಜನಗಳಿಗೆ ಉಪಯೋಗವಾಗುವ ಬಾವಿ ತೋಡುವ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇದು ನನ್ನ ಜನರಿಗೆ ಬಂದಿದೆ. ಯಲ್ಲಾಪುರ ತಾಲ್ಲೂಕಿನ ಉಮ್ಮಚ್ಚಿಗೆ ಎಂಬ ಗ್ರಾಮದಲ್ಲಿ ಒಂದು ಬಾವಿಯನ್ನು ತೋಡಿದರೂ ಸರಿಯಾಗಿ ಕೆಲಸ ನಡೆದಿಲ್ಲ ದೂರು ಬಂದಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ಹೇಳಿದರೂ ಕೂಡ ಅವರು ಈ ಬಗ್ಗೆ ಗಮನಹರಿಸಿಲ್ಲ. ಇದರಿಂದಾಗಿ ಬಾವಿ ಕುಸಿದು ಬಿದ್ದಿದೆ. ಈ ಹಣವನ್ನು ಯಾರ ಖಾತೆಗೆ ಖರ್ಚು ಹಾಕಬೇಕು ಎಂದು ಕೇಳಂತ್ತೇನೆ. ಇಂತಹದ್ದೆಲ್ಲಾ ನಡೆಯುತ್ತದೆ. ಇದನ್ನೆಲ್ಲಾ ನೋಡಿ ಇದಕ್ಕೆ ಸರಿಯಾದ ಬಂದೋಬಸ್ತು ಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು.

ಈ ವರ್ಷ ಮಕ್ಕಳ ವರ್ಷ. ಮಕ್ಕಳ ಏಳಿಗೆಗೋಸ್ಕರ ಸಾಕಷ್ಟು ಹಣವನ್ನು ಒದಗಿಸಿಲ್ಲ. ಆದ್ದರಿಂದ ಇದು ಮಕ್ಕಳ ವರ್ಷವಾದ್ದರಿಂದ ಮಕ್ಕಳ ಅಭಿವೃದ್ಧಿಗೋಸ್ಕರ ಹೆಚ್ಚಿನ ಹಣವನ್ನು ಒದಗಿಸಿ ಅವರ ಏಳಿಗೆಗೆ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಮಕ್ಕಳ ಏಳಿಗೆಯಾದರೆ ಜನ್ಮಾಂಗದ ಏಳಿಗೆ ಯಾಗುತ್ತದೆ; ಸಮಾಜದ ಏಳಿಗೆಯಾಗುತ್ತದೆ. ಈ ರೀತಿಯಿಂದ ಕೆಲಸ ಮಾಡಬೇಕೆ ಹೊರತು ಆದಕ್ಕೆ ಇಷ್ಟು ದುಡ್ಡು, ಇದಕ್ಕೆ ಇಷ್ಟು ದುಡ್ಡು ಖರ್ಚು ಮಾಡಿದ್ದೇವೆ ಎಂದು ಹೇಳಿದರೆ ಅದು ಉಷ್ಟು ಉಪಯುಕ್ತವಾಗುವುದಿಲ್ಲ. ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಕಳೆದ ಅಧಿವೇಶನದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಬಂಧನದ ಬಗ್ಗೆ ನಡೆದ ಗಲಭೆಯ ಸಂಬಂಧದಲ್ಲಿ ನ್ಯಾಯಾಂಗ ವಿಚಾರಣೆಯಾಗ ಬೇಕೆಂದು ನಾನು ನಮ್ಮ ನ್ಯಾಯವಾದ ಬೇಡಿಕೆಯನ್ನು ತಮ್ಮ ಮುಂದೆ ಇಟ್ಟಾಗ ತಾನು ನಮ್ಮನ್ನೆಲ್ಲಾ ಸಸ್ಪೆಂಡ್ ಮಾಡಿ ಹೊರಕ್ಕೆ ಹಾಕಿದಿರಿ. ಆಗ ಎಷ್ಟು ಹಣ ಖರ್ಚಾಯಿತು ಎಂಬ ಬಗೆ ಈಗ ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಮೊದಲೇ ಇದನ್ನು ಒಪ್ಪಿಕೊಂಡಿದ್ದರೆ ಇಷ್ಟೆಲ್ಲಾ ಖರ್ಚು ತೊಂದರೆಗಳು ಆಗುವುದು ತಪ್ಪುತ್ತಿತ್ತು.

ಮಂತ್ತೊಂದು ವಿಷಯವೇನೆಂದರೆ, ಮಾನ್ಯ ಹಣಕಾಸಿನ ಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಭಾಗ್ಯಜ್ಯೋತಿ ಕಾರ್ಯಕ್ರಮವನ್ನು ಹಾಕಿಕೊಂಡಿರುವ ವಿಚಾರವನ್ನು ಹೇಳಿದಾರೆ. ಭಾಗ್ಯಜ್ಯೋತಿ ತರುವುದು ನಿಜವಾಗಿಯೂ ಒಳ್ಳೆಯದು. ಆದರೆ ಅದನ್ನು ಎಲ್ಲಿ ಮಾಡುತ್ತಾರೋ ಗೊತ್ತಿಲ್ಲ ಎಷ್ಟೋ ಹಳ್ಳಿಗಳಿಗೆ ವಿದ್ಯುತ್ ದೀಪವಿಲ್ಲ, ವಿದ್ಯುಚ್ಛಕ್ತಿ ಹೋಗಿಲ್ಲ. ಆದ್ದರಿಂದ ಭಾಗ್ಯಜ್ಯೋತಿಯನ್ನು ಟೌನ್‌ನಲ್ಲಿ ತರುತ್ತಾರೋ? ಹಳ್ಳಿಗಳಲ್ಲಿ ತರುತ್ತಾರೋ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಆದ್ದರಿಂದ ಇಂತಹದ್ದನ್ನು ಸರಿಯಾಗಿ ಹಾಕುವಂತಹ ವ್ಯವಸ್ಥೆ ಮಾಡಬೇಕು. ಪರಿಸ್ಥಿತಿಯನ್ನು ಕಂಟ್ರೋಲ್ ಮಾಡಿ ಬಡ್ಜೆಟ್ಟಿನಲ್ಲಿ ತಾವು ಬಡಜನರಿಗೋಸ್ಕರ ಏನು ಹಣವನ್ನು ಒದಗಿಸುತ್ತೀರಿ ಅದು ಸರಿಯಾಗಿ ಸದುಪ

ಯೋಗ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಖರ್ಚು ಮಾಡುವ ಪ್ರತಿಯೊಂದು ನಯಾಪೈಸೆ ಕೂಡ ಸದುಪಯೋಗವಾಗಬೇಕು ಎಂದು ಇನ್ನೊಮ್ಮೆ ಕೇಳಿಕೊಂಡು ಮಾನ್ಯ ಅಧಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.– ಮಾನ್ಯ ಅಧ್ಯಕ್ಷರೆ, ತಾವು ಮಾನ್ಯ ಸದಸ್ಯರಿಗೆ ಬಡ್ಜೆಟ್ ಮೇಲೆ ಮಾತನಾಡುವುದಕ್ಕೆ ಕಾಲಾವಕಾಶವನ್ನು ಕೊಡುವುದರಲ್ಲಿ ಸ್ವಲ್ಪ ಡಿಸ್ಕ್ರಿಮಿನೇಷನ್ ಆಗುತ್ತಿದೆ. ಯಾವ ಯಾವ ಪಕ್ಷದವರಿಗೆ ಎಷ್ಟೆಷ್ಟು ಕಾಲಾವಕಾಶ ಕೊಡಬೇಕೆಂಬುದನ್ನು ತಾವು ಸರಿಯಾಗಿ ನಿರ್ಧಾರ ಮಾಡಬೇಕು. ನಾನು ಬಡ್ಜೆಟ್ ಮೇಲೆ ಮಾತನಾಡಬೇಕೆಂದು ಹೇಳಿ ಒಂದೇ ದಿವಸದಲ್ಲಿ ೫೦೦ ಮೈಲಿಗಳನ್ನು ಪ್ರಯಾಣ ಮಾಡಿದೆ. ಬೆಳಗ್ಗೆ ಹೋಗಿ ಸಾಯಂಕಾಲ ಬಂದೆ. ನ್ಯಾಷನಲ್ ಕಾಂಗ್ರೆಸ್ ಪಕ್ಷದಲ್ಲಿ ನಾನೊಬ್ಬನೇ ಸದಸ್ಯನಿದ್ದೇನೆ. ಆದ್ದರಿಂದ ನಾನು ಒಂದೂವರೆ ಕಾಲ ಮಾತನಾಡಬೇಕೆಂದು ಬಂದರೆ ತಾವು ಕೇವಲ ಅರ್ಧ ಗಂಟೆ ಮಾತ್ರ ಕೊಟ್ಟಿರಿ. ಇದು ಸರಿಯಲ್ಲ ಆದ್ದರಿಂದ ಕಾಲಾವಕಾಶ ಕೊಡುವುದರಲ್ಲಿ ಭೇದಭಾವ ಮಾಡದೆ ಎಲ್ಲರಿಗೂ ಸಮಾನ ಅವಕಾಶ ಸಿಕ್ಕುವಂತೆ ಮಾಡಬೇಕು.

ಶ್ರೀಮತಿ ಎಸ್. ಪ್ರಮಿಳ.—ಸ್ವಾಮಿ ಪಾರ್ಟಿ ಎಂದರೆ ಹೆಂಗಸರು ಮತ್ತು ಗಂಡಸರು, ಇಬ್ಬರಿಗೂ ಅರ್ಧರ್ಧ ಅವಕಾಶ ಕೊಡಬೇಕು.

SRI A. LAKSHMISAGAR—Sir, the Finance Minister has said at the fag end that:

> "I shall be seeking a Vote on Account to cover expenditure during the first four months of the year in order to provide sufficient time for a detailed discussion on the Demands later before the expenditure for the full year is voted."

This is what he said. In the Appropriation bill under consideration there is no indication that the Appropriation Bill limits itself for payment being made for a period of four months. All that it says is part of the financial year 1979-80. I would very much like the Minister to clarify the position.

†ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಅಧಕ್ಷರೇ, ಈಗತಾನೆ ಸ್ನೇಹಿತರಾದ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಹೇಳಿದಂತೆ ಓಟ್ ಆನ್ ಅಕೌಂಟ್ ವಿಚಾರದಲ್ಲಿ ವಿವರವಾಗಿ ಹೇಳಿದ್ದೇವೆ. ಆದರಲ್ಲಿ ಎಷ್ಟು ಡಿಪಾರ್ಟ್‌ಮೆಂಟ್ಸ್ ಇವೆ, ಯಾವ ರೀತಿ ಮಾಡಬೇಕು ಎನ್ನುವುದನ್ನೂ ಸಹ ನಾವು ತಿಳಿಸಿದ್ದೇವೆ. This is the part of the Appropriation Bill. ಶ್ರೀ ಮತಿ ಆನಂಸೂಯ ಗಜಾನನ ಶರ್ಮರವರು ಒಂದು ಒಳ್ಳೆಯ ವಿಚಾರವನ್ನು ಹೇಳಿದ್ದಾರೆ. ಅವರು ಸರ್ಕಾರದ ನೀತಿಯನ್ನೇ ಹೇಳಿದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡುತ್ತಿದೆ, ಅದು ಸದುಪಯೋಗವಾಗಬೇಕು ಎಂದು ಏನು ಹೇಳಿದ್ದಾರೆ, ಅದು ಸರ್ಕಾರದ ನೀತಿಯಾಗಿದೆ. ಈ ರೀತಿಯಾದ ಉತ್ತಮವಾದ ಆರ್ಥಿಕ ನೀತಿಯನ್ನು ಕರ್ನಾಟಕದಲ್ಲಿ ನಾವು ಮಾಡಿದ್ದರಿಂದಲೇ ಕಳೆದ ವರ್ಷದ ಬಜೆಟ್‌ನಲ್ಲಿ ೧೨೦ ಕೋಟಿ ರೂಪಾಯಿ ಡಿಫಿಸಿಟ್ ಇದ್ದರೂ ಇಡೀ ವರ್ಷದಲ್ಲಿ we have not resorted to overdraft facilities of the Reserve Bank. ಏಕೆಂದರೆ ಇದಕ್ಕಿಂತಲೂ ಮುಂಚೆ ಓವರ್ ಡ್ರಾಫ್ಟ್ ಆಗುವುದು ಬಹಳ ಇತ್ತು. ಕಳೆದ ವರ್ಷ ೧೨೦ ಕೋಟಿ ರೂಪಾಯಿಗಳ ಡಿಫಿಸಿಟ್ ಇದ್ದರೂ ಸರ್ಕಾರ ಯಾವ ಒಂದು ಓವರ್ ಡ್ರಾಫ್ಟ್‌ಗೂ ರಿಸಾರ್ಟ್ ಮಾಡದೆ ಇದು ಚೆನ್ನಾಗಿ ನಡೆದುಕೊಂಡು ಹೋಗಿದೆ. ಈ ಹಣ ಸದುಪಯೋಗವಾಗಬೇಕು ಎನ್ನುವುದು ಸರ್ಕಾರದ ಇಚ್ಛೆಯಾಗಿದೆ.

ಶ್ರೀ ಭೀಮಣ್ಣ ಖಂಡ್ರೆ.—ಬೇಕಾದಷ್ಟು ಹಣ ಲ್ಯಾಪ್ಸ್ ಆಗಿದೆ.

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಸದಸ್ಯರಾದ ಖಂಡ್ರೆಯವರು ಲ್ಯಾಪ್ಸ್ ಆಗಿದೆ ಎಂದು ಹೇಳುತ್ತಿದ್ದಾರೆ. ಫೈನಾನ್ಷಿಯಲ್ ನೀತಿ ಇದೆ, ಆರ್ಥಿಕ ತತ್ವ ಇದೆ, ಆ ತತ್ವದ ಮೇಲೆ ಸರ್ಕಾರ ನಡೆದುಕೊಂಡು ಹೋಗಿದ್ದುದರಿಂದಲೇ ನಮ್ಮ ರಾಜ್ಯದ ಇನ್‌ಕಂ ಇಷ್ಟು ಹೆಚ್ಚಿದೆ, ಪರ್ ಕ್ಯಾಪಿಟಾ

ಇನ್‌ಕಂ ಕೂಡ ಹೆಚ್ಚಿದೆ. ಇಡೀ ಸೌತ್ ಇಂಡಿಯಾನಲ್ಲಿ ನಮ್ಮ ರಾಜ್ಯ ಹೈಯಸ್ಟ್ ಆಗಿದೆ. ಈ ರೀತಿ ಉತ್ತಮವಾದ ಫೈನಾನ್‌ಷಿಯಲ್ ಪಾಲಿಸಿಯನ್ನು ಅನುಸರಿಸಿದ್ದರಿಂದ, ಉತ್ತಮವಾದ ಫೈನಾನ್ ಷಿಯಲ್ ಮ್ಯಾನೇಜ್‌ಮೆಂಟ್ ಇರುವುದರಿಂದ ಕರ್ನಾಟಕ ಇಡೀ ದೇಶದಲ್ಲಿ ಶಿನೇ ಸ್ಥಾನದಲ್ಲಿದೆ. ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಬೊಮ್ಮಾಯಿಯವರು ಅಂಕಿಅಂಶಗಳನ್ನು ಹೇಳಿದ್ದಾರೆ. ಆಷ್ಟು ಚೆನ್ನಾಗಿ ನಾವು ಮಾಡುತ್ತಿದ್ದೇವೆ. ಶ್ರೀಮತಿ ಅನುಸೂಯ ಗಜಾನನ ಶರ್ಮರವರು ಸೌತ್ ಕೆನರಾ ಬಹಳ ಹಿಂದುಳಿದಿದೆ ಎಂದು ಏನು ಹೇಳಿದ್ದಾರೆ ಅದರಲ್ಲಿ ಬಹಳಷ್ಟು ಸತ್ಯ ಇದೆ. ಸರ್ಕಾರ ಕೂಡ ಅಲ್ಲಿ ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಬೇಕು ಎಂದು ಇದೆ. ಬೇಕಾದಷ್ಟು ಯೋಜನೆಗಳನ್ನು ಪ್ರಾರಂಭ ಮಾಡಿದ್ದೇವೆ. ಇನ್‌ಈಕ್ವಾಲಿಟಿ ಇರಬಾರದು ಎಂದು ಶ್ರೀ ಮತಿ ಅನಸೂಯ ಗಜಾನನ ಶರ್ಮರವರು ಹೇಳಿದರು. ಇದು ನಿಜವಾದ ವಿಚಾರ. ನಾವು ಹೆಚ್ಚು ಹೆಚ್ಚು ಸಹಾಯ ಮಾಡಬೇಕು ಎಂದು ಇದ್ದೇವೆ. ಅಲ್ಲಿ ಭಾವಿ ಇಲ್ಲ ಎಂದು ಹೇಳಿದರು, ಭಾವಿ ಸಹ ಮಾಡಲಿಕ್ಕೆ ನಾನು ಖಂಡಿತವಾಗಿ ಹೇಳುತ್ತೇನೆ. ಇಷ್ಟು ಹೇಳಿ ಮಾನ್ಯ ಸಭೆ ಈ ಅಪ್ರೊಪ್ರಿಯೇಷನ್ ಬಿಲ್ಲನ್ನು ಒಪ್ಪಿಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

MR. SPEAKER.—The question is.

"That the Karnataka Appropriation (No. 2) Bill, 1979, be taken into consideration."

The motion was adopted

CLAUSE 2, 3 & SCHEDULE.

MR. SPEAKER.—The question is :

"That clauses 2, 3 and the schedule do stand part of the Bill."

The motion was adopted.

Clauses 2, 3 and schedule were added to the Bill

CLAUSE 1, etc.

MR. SREAKER.—The question is :

"That Clause 1, the long Title, Preamble and the Enacting Formula do stand part of the Bill."

The motion was adopted.

Clause 1, the long Title, the Preamble and the Enacting Formula were added to the Bill.

Motion to pass

SRI S. M. YAHYA.—I move.

"That the Karnataka Approprimation (No. 2) Bill, 1979, be passed."

MR. SPEAKER.—The question is :

"That the Karnataka Appropriation (No. 2) Bill, 1979, be passed,"

The motion was adapted and the Bill, was passed